# ಶ್ರೀಮಾತೆ

ಮೂಲ ಬಂಗಾಳಿ : **ಆಶುತೋಷ್ ಮಿತ್ರ** ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

## ಭಾಗ ೧೭

**ಭಾ**ರತದ ಬಹಳ ಪ್ರಾಚೀನ ನಗರವಾದ ಮಧುರೆಯ ಸಂಕ್ಷಿಪ್ತ ವಿವರಣೆಯನ್ನಿಲ್ಲಿ ನೀಡುತ್ತೇನೆ. ಭಾರತದಲ್ಲಿ ರೈಲುಮಾರ್ಗ ಆರಂಭವಾಗುವುದಕ್ಕೂ ಬಹಳ ಮೊದಲೇ ಯಾತ್ರಿಕರ ಸೌಲಭ್ಯಕ್ಕಾಗಿ ರಾಣಿ ಅಹಲ್ಯಾಬಾಯಿ ಬಂಗಾಳದ ಮೇದಿನೀಪುರದಿಂದ ಶ್ರೀಜಗನ್ನಾಥ ಕ್ಷೇತ್ರದ ಮೂಲಕ ರಾಮೇಶ್ವರದ ತನಕ ಒಂದು ಅಗಲವಾದ ರಸ್ತೆಯನ್ನು ನಿರ್ಮಿಸಿಕೊಟ್ಟಿದ್ದಳು. ಈ ರಸ್ತೆಯಲ್ಲಿ ಅಲ್ಲಲ್ಲಿ ಸಾಧು-ಸಂನ್ಯಾಸಿಗಳಿಗಾಗಿ ಛತ್ರ ಅಥವಾ ಸದಾವ್ರತಗಳಿವೆ. ಈಗಲೂ ಅನೇಕ ಮಂದಿ ಸಾಧು-ಸಂನ್ಯಾಸಿಗಳು ಈ ರಸ್ತೆಯಲ್ಲಿಯೇ ಶ್ರೀಜಗನ್ನಾಥ ಕ್ಷೇತ್ರದ ದರ್ಶನ ಮುಗಿಸಿ, ಜಿವುಡೇ ನೃಸಿಂಹಜೀ, ವೆಂಕಟಾದ್ರಿ ಅಥವಾ ಶ್ರೀಶೈಲದ ಬಾಲಾಜಿ, ವಿಷ್ಣುಕಾಂಚಿ ಅಥವಾ ಶಿವಕಾಶಿ, ತಿರುಚಿನಾಪಳ್ಳಿಯ ಶ್ರೀರಂಗಂ, ಮಧುರೈ, ಕೂರ್ಮಕ್ಷೇತ್ರ ಮೊದಲಾದ ದಕ್ಷಿಣದ ಪ್ರಸಿದ್ಧ ತೀರ್ಥಕ್ಷೇತ್ರಗಳ ದರ್ಶನ ಮಾಡಿ ರಾಮೇಶ್ವರಕ್ಕೆ ಬರುತ್ತಿದ್ದಾರೆ. ರಾಮೇಶ್ವರದಿಂದ ಇನ್ನೊಂದು ಇಟ್ಟಿಗೆಯ ರಸ್ತೆ, ಭಾರತದ ಪಶ್ಚಿಮ ಸಾಗರದ ತೀರದ ಮೂಲಕ ದ್ವಾರಕೆಯವರೆಗೂ ಸಾಗುತ್ತದೆ. ಸಾಧುಗಳು ರಾಮೇಶ್ವರ ದರ್ಶನ ಮಾಡಿದ ಮೇಲೆ ಈ ದಾರಿಯಲ್ಲಿ ಪದ್ಮನಾಭ, ಜನಾರ್ದನ, ಕನ್ಯಾಕುಮಾರಿ, ಗೋಕರ್ಣ ಮಹಾದೇವ, ಮಹಾಬಲೇಶ್ವರ, ಪಂಡರಾಪುರ, ಮೊದಲಾದ ತೀರ್ಥಸ್ಥಳಗಳ ದರ್ಶನ ಮಾಡುತ್ತ ಪ್ರಭಾಸ ಹಾಗೂ ದ್ವಾರಕೆಯನ್ನು ತಲುಪುತ್ತಾರೆ.

ಮದುರೆಯು ವೈಗೈ ನದಿಯ ದಕ್ಷಿಣದ ತೀರದಲ್ಲಿದೆ. ಅಲ್ಲಿ ಎರಡು ಧರ್ಮಶಾಲೆಗಳಿವೆ. ಒಂದು ರೈಲ್ವೇ ಸ್ಟೇಶನ್ನಿನ ಸಮೀಪ; ಇನ್ನೊಂದು ವೈಗೈ ನದಿಯ ತೀರದಲ್ಲಿ. ಮಧ್ಯಾಹ್ನ ನಾವು ಮಂದಿರ ದರ್ಶನಕ್ಕಾಗಿ ಹೊರಟೆವು. ಮದುರೆಯಲ್ಲಿ ಮೀನಾಕ್ಷಿ ಮಂದಿರ ಅತ್ಯಂತ ಪ್ರಸಿದ್ಧವಾದುದು. ಇಷ್ಟು ಸುಂದರವಾದ, ಪ್ರಾಚೀನವಾದ ಹಾಗೂ ಬೃಹತ್ತಾದ ಮಂದಿರ ದಕ್ಷಿಣ ಭಾರತದಲ್ಲಿ ಬೇರೆ ಯಾವುದೂ ಇಲ್ಲ. ಶಿಲ್ಪಕಲೆಯ ನೈಪುಣ್ಯದಲ್ಲಿ ಇದು ಇಡೀ ಭಾರತದಲ್ಲೇ ಅದ್ವಿತೀಯವಾಗಿದೆ. ಈ ಮಂದಿರವನ್ನು ಕುರಿತಾಗಿ ಸ್ಥಳಪುರಾಣ ಹೀಗೆ ಹೇಳುತ್ತದೆ:

ದೇವತೆಗಳ ರಾಜನಾದ ಇಂದ್ರನು ಬ್ರಹ್ಮಹತ್ಯಾ ಪಾಪದಿಂದ ಮುಕ್ತನಾಗಲು ಭಾರತದ ತೀರ್ಥಕ್ಷೇತ್ರಗಳನ್ನು ದರ್ಶನ ಮಾಡುತ್ತಾ ಈ ಕ್ಷೇತ್ರಕ್ಕೆ ಬರುವಷ್ಟರಲ್ಲೇ ಅವನ ಪಾಪ ಅವನಿಂದ ತೊಲಗಿ ಹೋಯಿತು. ಆಗ ಅವನು ಈ ಪಾಪವಿಮೋಚನೆಗೆ ಕಾರಣವ



ನ್ನರಿಯಲು ಯತ್ನಿಸಿ, ಅನ್ವೇಷಣೆ ಮಾಡಿದಾಗ ಇಲ್ಲಿ ಒಂದು ಅನಾದಿಲಿಂಗವನ್ನು ನೋಡಿದ. ಬಳಿಕ ವಿಶ್ವಕರ್ಮನ ಮೂಲಕ ಒಂದು ಮಂದಿರವನ್ನು ನಿರ್ಮಿಸಿ, ವೈಶಾಖೀ ಪೂರ್ಣಿಮೆಯ ದಿನದಂದು ವೈದಿಕ ಪದ್ಧತಿ ಪ್ರಕಾರ ಬೃಹಸ್ಪತಿಯ ಮೂಲಕ ಆ ಲಿಂಗವನ್ನು ಪ್ರತಿಷ್ಠಾಪಿಸಿದ. ಆ ಲಿಂಗಮೂರ್ತಿಗೆ 'ಸುಂದರ'ನೆಂದು ನಾಮಕರಣ ಮಾಡಿದ. ಮೇಲೆ ಹೇಳಿದ ಪುರಾಣದಲ್ಲಿ ಇನ್ನೂ ಹೇಳಲಾಗಿದೆ — ಶ್ರೀರಾಮಚಂದ್ರನು ಸೀತೆಯ ಅನ್ವೇಷಣೆ ಮಾಡುತ್ತ ಲಂಕೆಯ ಕಡೆಗೆ ಹೊರಟು, ಇಲ್ಲಿಗೆ ಬಂದಿದ್ದ. ಅಗಸ್ತ್ಯ ಮುನಿಯ ಆದೇಶದಂತೆ ಮದುರೆಯಲ್ಲಿ ಸುಂದರ ಮೂರ್ತಿಯ ಪೂಜೆ ಹಾಗೂ ಆರಾಧನೆ ಮಾಡಿದನಂತೆ.

ಕ್ರಿಸ್ತಶಕ ಹದಿನಾಲ್ಕನೇ ಶತಮಾನದಲ್ಲಿ ದಕ್ಷಿಣ ಭಾರತದ ಮೇಲೆ ಮುಸಲ್ಮಾನ ಅರಸರು ಆಕ್ರಮಣ ಮಾಡಿದಾಗ ಈ ಮಂದಿರದ ಎದುರಿಗಿರುವ ಗೋಡೆ ಹಾಗೂ ಗೋಪುರ (ಅಥವಾ ಪ್ರವೇಶದ್ವಾರ) ವನ್ನು ಒಡೆದು ಹಾಕಿದರು. ಹಾಗೆ ಒಡೆದ ಆ ಗೋಪುರದ ಕೆಳಭಾಗದಲ್ಲಿ ಈಗ ಅಂಗಡಿಗಳಿವೆ. ಮಂದಿರದ

ನಾಲ್ಕೂ ಭಾಗಗಳಲ್ಲಿ ರಾಜಪಥವಿದೆ. ಅವುಗಳಲ್ಲಿ ಒಂಬತ್ತು ಪ್ರವೇಶದ್ವಾರಗಳಿವೆ. ಅವುಗಳಲ್ಲಿ ಒಂದು ೧೫೨ ಅಡಿ ಎತ್ತರವಿದೆ. ಈ ದೇವಾಲಯದ ಪ್ರಾಂಗಣವು ಉತ್ತರದಿಂದ ದಕ್ಷಿಣಕ್ಕೆ ೮೩೭ ಅಡಿ ಹಾಗೂ ಪೂರ್ವದಿಂದ ಪಶ್ಚಿಮಕ್ಕೆ ೭೪೪ ಅಡಿ ವಿಸ್ತಾರವಾಗಿದೆ. ಮಂದಿರದ ಮಧ್ಯದಲ್ಲಿ ಸುಂದರೇಶ್ವರ ಸ್ವಾಮಿ ಅಥವಾ 'ಸುಂದರ' ಲಿಂಗದ ಹಾಗೂ ಮೀನಾಕ್ಷೀದೇವಿಯ ಮೂರ್ತಿ ರಾರಾಜಿಸುತ್ತಿದೆ. ವಿವಿಧ ಸ್ಥಳಗಳಲ್ಲಿ ಸುಂದರೇಶ್ವರನ ಲೀಲೆಗಾಗಿ ಅನೇಕ ಮಂಟಪಗಳಿವೆ. ಅವುಗಳ ನಡುವೆ, 'ಸಹಸ್ರ-ಸ್ತಂಭ-ಮಂಟಪ' ಅಥವಾ 'ವಸಂತ-ಮಂಟಪ' ಎಂಬ ಎರಡು ಮಂಟಪಗಳು ಪ್ರಸಿದ್ಧವಾಗಿವೆ. ಮಂದಿರದ ಒಟ್ಟು ಒಳಭಾಗ ಒಂದು ದೊಡ್ಡಬಂಡೆಯ ಮೇಲೆ ನಿರ್ಮಿತವಾಗಿದೆ. ಸಹಸ್ರ-ಸ್ತಂಭ-ಮಂಟಪ ಅಥವಾ ಒಂದು ಸಾವಿರ ಸ್ತಂಭಗಳಿಂದ ಕೂಡಿದ ಮಂಟಪವು ಶಿಲ್ಪಕಲೆ ಹಾಗೂ ಚಿತ್ರಕಲೆಯ ನೈಪುಣ್ಯದ ದೃಷ್ಟಿಯಿಂದ ವರ್ಣನಾತೀತವಾಗಿದೆ. ಅದು ನೋಡಲೇಬೇಕಾದ ಒಂದು ಸಂಗತಿ. ವಸಂತ-ಮಂಟಪದ ಉದ್ದ ೧೦೦ ಗಜ ಹಾಗೂ ಅಗಲ ೬೦ ಅಡಿ. ಅದರ ಚಾವಣಿ ೧೨೦ ಅಡಿ ಎತ್ತರವಿದೆ; ಅದು ಕಲ್ಲಿನ ಸ್ತಂಭದ ಮೇಲೆ ನಿರ್ಮಿಸಲ್ಪಟ್ಟಿದೆ. ಪ್ರತಿಯೊಂದು ಸ್ತಂಭವೂ ೨೦ ಅಡಿ ಎತ್ತರವಿದೆ. ಇದರ ನಡುವೆ ನೀರು ಹರಿದಾಡಲು, ನೀರಿನ ಕಾಲುವೆಯಿದೆ. ಪೌರ್ಣಮಿಯವರೆಗೆ ಸುಂದರೇಶ್ವರ ಸ್ವಾಮಿಯ ವಸಂತ ಕ್ರೀಡಾ ಉತ್ಸವ ನಡೆಯುವುದು. ಆ ಉತ್ಸವಕ್ಕೆ ಅನೇಕ ಮಂದಿ ಬಂದು ಸೇರುತ್ತಾರೆ. ಈ ಮಂಟಪವನ್ನು ಭಕ್ತನಾದ ರಾಜಾ ತಿರುಮಲ ನಾಯಕನು ಇಪ್ಪತ್ತು ಲಕ್ಷ ಮುದ್ರೆ ಖರ್ಚು ಮಾಡಿ ನಿರ್ಮಿಸಿದ. ಮಂದಿರದ ಪಕ್ಕದಲ್ಲಿ ಕಲ್ಲಿನಿಂದ ನಿರ್ಮಿಸಿದ ಶಿವಗಂಗಾ ಎಂಬ ಹೆಸರಿನ ಸರೋವರವಿದೆ. ಆ ಸರೋವರದ ನಾಲ್ಕೂ ದಿಕ್ಕುಗಳಲ್ಲಿ ಚಾಂದಿನಿ ಹಾಗೂ ಮಧ್ಯಭಾಗದಲ್ಲಿ ಸುಂದರ-ಲೀಲಾ-ಮಂಟಪವಿದೆ.

ಶ್ರೀಮಾತೆ ಹಾಗೂ ಇತರರು ಈ ಸರೋವರದಲ್ಲಿ ಮಧ್ಯಾಹ್ನ ಸ್ನಾನ ಮಾಡಿ, ವಿಧಿ ಪ್ರಕಾರ ದರ್ಶನ ಮೊದಲಾದವನ್ನು ಮಾಡಿ, ಸಾಯಂಕಾಲ ಮರಳಿ ಬಂದರು. ಇಲ್ಲಿನ ಪದ್ಧತಿಯ ಪ್ರಕಾರ, ಸ್ತ್ರೀಯರು ಕತ್ತಲಾದ ಮೇಲೆ ದೀಪವನ್ನು ಖರೀದಿಸಿ, ಶಿವಗಂಗೆಯ ತೀರದಲ್ಲಿ ತಮ್ಮ ತಮ್ಮ ಹೆಸರನ್ನು ಹೇಳಿ, ಅಲ್ಲೇ ಬಿಡಬೇಕು. ಶ್ರೀಮಾತೆ ಕೂಡ ತಮ್ಮ ಹೆಸರಿನಲ್ಲಿ ದೀಪವನ್ನು ಬಿಟ್ಟರು. ರಾತ್ರಿ ಮಂದಿರವನ್ನು ಬೆಳಕಿನ ಮಾಲೆಗಳಿಂದ ಬೆಳಗುತ್ತಾರೆ.

ಒಂದು ಮೈಲು ದೂರದಲ್ಲಿರುವ ತಿರುಮಲ ನಾಯಕನ ಚೌಲ್ಟ್ರಿ ಅಥವಾ ರಾಜಭವನ ನೋಡಬೇಕಾದ ಸ್ಥಳವಾಗಿದೆ. ಸಮುದಾಯ ಭವನವನ್ನು ಕಲ್ಲಿನಿಂದಲೇ ಭದ್ರವಾಗಿ ಕಟ್ಟಿದ್ದಾರೆ. ಈ ಉತ್ತಮ ಕಟ್ಟಡದ ಚಾವಣಿಯು ಇಪ್ಪತ್ತು-ಇಪ್ಪತ್ತೈದು ಆಶ್ಚರ್ಯಕರವಾಗಿ ಕೊರೆಯಲಾದ ಕಂಬಗಳ ಮೇಲೆ ಸುರಕ್ಷಿತವಾಗಿದೆ. ಈಗ ಈ ಸ್ಥಳದಲ್ಲಿ ಜಡ್ಜಿಗಳ ಅದಾಲತ್ ಮೊದಲಾದ ಕೆಲವು ಸರ್ಕಾರೀ ಕಚೇರಿಗಳಿವೆ. ಈ ಜಾಗದಲ್ಲಿ ಜಡ್ಜ್‌ಗಳ ಬಂಗಲೆಗೆ ಸೇರಿದಂತಿರುವ ಜಮೀನಿನಲ್ಲಿ ಒಂದು ದೊಡ್ಡ ವಟವೃಕ್ಷವಿದೆ. ಅದರ ಬೇರಿನ ಉದ್ದ ಸುಮಾರು ೭೦ ಅಡಿ ಹಾಗೂ ಅದರ ರೆಂಬೆ ಕೊಂಬೆಗಳು ಸುಮಾರು ೧೮೦ ಅಡಿಯವರೆಗೂ ವ್ಯಾಪಿಸಿದೆ. ಈ ಚೌಲ್ಟ್ರಿಯಿಂದ ಒಂದೂವರೆ ಮೈಲು ಈಶಾನ್ಯ ಭಾಗಕ್ಕೆ ರಾಮೇಶ್ವರಕ್ಕೆ ಹೋಗುವ ಕಾಲುನಡಿಗೆಯ ಹಾದಿಯ ಪಕ್ಕದಲ್ಲಿ ತೇಪ್ಪಕುಳಂ ಎಂಬ ಹೆಸರಿನ ಒಂದು ದೊಡ್ಡ ಸರೋವರವಿದೆ. ಅದರ ಒಂದೊಂದು ಭಾಗವೂ ೧೨೦೦ ಗಜ ದೀರ್ಘವಾಗಿದೆ; ನಾಲ್ಕೂ ಕಡೆ ಕಲ್ಲಿನಿಂದ ನಿರ್ಮಿಸಿದ ಸೌಧಗಳಿವೆ; ಅಲ್ಲಲ್ಲಿ ಕಲ್ಲಿನ ಅಶ್ವ, ನವಿಲು ಮೊದಲಾದ ಮೂರ್ತಿಗಳಿವೆ. ಸರೋವರದ ಮಧ್ಯಭಾಗದಲ್ಲಿ ನಾಲ್ಕೂ ಕಡೆ ಕಲ್ಲಿನಿಂದ ಕಟ್ಟಿರುವ ಒಂದು ಉಪದ್ವೀಪವಿದೆ. ಅದರ ನಡುವೆ ಎರಡಂತಸ್ತಿನ ದೇವಾಲಯ ಹಾಗೂ ನಾಲ್ಕು ಭಾಗಗಳಲ್ಲೂ ಶಿಲ್ಪಕಲೆಗಳಿಂದ ಕೂಡಿದ ನಾಲ್ಕು ಸಣ್ಣ ಗುಡಿಗಳೂ ಇವೆ. ಬೇಸಿಗೆಯಲ್ಲಿ ನಡೆಯುವ ಜಲಯಾತ್ರಾ ಉತ್ಸವದಲ್ಲಿ ರಾತ್ರಿ ಹೊತ್ತು ಸುಂದರೇಶ್ವರ ಸ್ವಾಮಿ ಹಾಗೂ ಮೀನಾಕ್ಷಿದೇವಿಯರನ್ನು ಈ ಸರೋವರಕ್ಕೆ ಕರೆತಂದು, ದೋಣಿಯಲ್ಲಿ ಕುಳ್ಳಿರಿಸಿ, ಈ ಉಪದ್ವೀಪದ ನಾಲ್ಕೂ ಕಡೆ ಸುತ್ತಾಡಿಸುತ್ತಾರೆ. ಆಗ ಸರೋವರದ ನಾಲ್ಕೂ ಕಡೆ ಒಂದು ಲಕ್ಷ ಬತ್ತಿಗಳನ್ನು ಹಚ್ಚಿ ಬೆಳಗಿಸುತ್ತಾರೆ. ಶ್ರೀಮಾತೆ ಹಾಗೂ ಇತರರು ರಾಮೇಶ್ವರಕ್ಕೆ ಹೋಗುವಾಗ ಹಾಗೂ ಮರಳಿ ಬರುವಾಗ ಈ ಸ್ಥಳವನ್ನೆಲ್ಲ ನೋಡಿ ವಿಶೇಷವಾಗಿ ಆನಂದಪಟ್ಟರು. ಬಳಿಕ, ''ಇದೆಲ್ಲ ಏನು ಠಾಕೂರರ ಲೀಲೆ!'' ಎಂದರು.

ಮರುದಿನ ಮಧ್ಯಾಹ್ನಕ್ಕೆ ರೈಲಿನಲ್ಲಿ ಯಾತ್ರೆ ಹೊರಟು, ಸಂಜೆ ಪಾಂಬನ್ ಪಾಸ್‌ನ ತೀರಕ್ಕೆ ಬಂದೆವು. ಇಲ್ಲಿ ರೈಲು ಕೊನೆಗೊಳ್ಳುವುದು. ಸ್ಟೇಶನ್ನಿನ ಹೆಸರು 'ಮಂಡಪಂ'. ಇಲ್ಲಿಂದ ಒಂದು ಸಣ್ಣ ಸ್ಟೀಮರ್‌ನಲ್ಲಿ ಖಾರಿಯನ್ನು ದಾಟಿ, ರಾಮೇಶ್ವರ ದ್ವೀಪವನ್ನು ತಲುಪಬೇಕಾಯಿತು. ಈಗ ಈ ಖಾರಿಯ ಮೇಲೆ ರೈಲುಗಾಡಿ ಓಡಾಡುತ್ತದೆ. ಆದರೆ ನಾವು ಹೋದಾಗ ಇನ್ನೂ ಸೇತುವೆಯ ಕಂಬಗಳ ನಿರ್ಮಾಣ ಕೆಲವು ಭಾಗ ಮಾತ್ರ ನಡೆದಿತ್ತು. ತ್ರೇತಾಯುಗದ ಆ ಸೇತುವೆ ಇಂದಿಗೂ ಕೂಡ ಸಮುದ್ರದ ಒಳಗಿನಿಂದ ಆರಂಭವಾಗಿ, ಶ್ರೀಲಂಕೆಯವರೆಗೆ ಸುಮಾರು ೬೦ ಮೈಲಿ ದೂರದವರೆಗೂ ಇದೆ; ನೆಲದಲ್ಲಿ ಮೂರುನಾಲ್ಕು ಮೈಲಿ ವ್ಯಾಪಿಸಿಕೊಂಡಿದೆ. ಅದನ್ನು ಈಗಲೂ ನೋಡಬಹುದು. ಆದರೂ ಮಧ್ಯೆ ಎರಡು-ಮೂರು ಸ್ಥಳಗಳಲ್ಲಿ ಅಂತರವಿರುವುದರಿಂದ, ಈಗ ಅದರ ಮೂಲಕ ದಾಟಿ ಹೋಗಲಾಗದು. ಈಗಲೂ ಕೂಡ ಉಚ್ಚಾಪಲ್ಲಿಯಿಂದ ಖಾಡಿಕಾ ಅಥವಾ ಹರ್ಬಲಾರ್ ಖಾರಿಯವರೆಗೆ ಹನ್ನೊಂದು ಮೈಲು ಇರುವ ಒಂದು ಭಾಗ ಭಾರತಕ್ಕೆ ಸೇರಿದೆ. ಅನಂತರ ಎರಡು ಮೈಲಿ ಅಂತರವಿದೆ – ಅದಕ್ಕೇ 'ಪಾಂಬನ್ ಪಾಸ್' ಎನ್ನುತ್ತಾರೆ. ಹಡಗು ಹೋಗಿ ಬರುವುದಕ್ಕೆ ಅನಂತರ ಅದನ್ನು ಸಿಡಿಮದ್ದಿನಿಂದ ಒಡೆದಿರಬೇಕು. ಈಗಲೂ ನೀರಿನ ನಡುವೆ ಅಲ್ಲಲ್ಲಿ ಕಲ್ಲಿನ ತುಣುಕುಗಳನ್ನು ಕಂಡಾಗ, ಶ್ರೀರಾಮನು ನಿರ್ಮಿಸಿದ ಸೇತುವೆ ಕಲ್ಲಿನಿಂದಲೇ ಕಟ್ಟಿದ್ದಿರಬೇಕು

ಅನ್ನಿಸುತ್ತದೆ. ಪಾಂಬನ್ ಖಾರಿಯ ನಂತರ ೨೪ ಮೈಲಿ ಉದ್ದ ಹಾಗೂ ೩-೪ ಮೈಲಿ ವಿಸ್ತೀರ್ಣವಿರುವ ರಾಮೇಶ್ವರ ದ್ವೀಪವಿದೆ. ಅದರ ನಂತರ ಸುಮಾರು ಮೂರು ಮೈಲಿ ಅಂತರವಿದೆ; ಅನಂತರ ಸಮುದ್ರದ ಉಬ್ಬರ ಬಂದಾಗ ನೀರಿರುತ್ತದೆ, ಇಳಿತವಾದಾಗ ಮರಳು ಹಾಗೂ ಕಲ್ಲುಬಂಡೆಗಳೇ ಕಾಣಿಸುತ್ತವೆ. ಅದರ ನಂತರ ೧೮ ಮೈಲಿ ಉದ್ದ ಹಾಗೂ ಎರಡು ಮೈಲಿ ಅಗಲ ವಿಸ್ತಾರವಾದ ಇನ್ನೊಂದು ಸೇತುವೆಯ ಭಾಗವಿದೆ. ಈ ಭಾಗದ ಹೆಸರು 'ಮನ್ನಾರ್ ದ್ವೀಪ'. ಅಲ್ಲೊಂದು ದುರ್ಗವಿದೆ; ಅಲ್ಲಿ ಬಹಳ ಮಂದಿ ವಾಸ ಮಾಡುತ್ತಾರೆ, ಹಾಗೂ ನಗರವಿದೆ. ಅಲ್ಲಿಂದ ನಂತರ ಪುನಃ ಎರಡು ಮೈಲು ಅಂತರ, ಅದನ್ನು ದಾಟಿ ಹೋದರೆ ಶ್ರೀಲಂಕೆ. ಇಲ್ಲಿ ನೀರು ಬಹಳ ಕಡಿಮೆ. ಎಷ್ಟು ಕಡಿಮೆ ನೀರೆಂದರೆ, ಇಳಿತವಾದಾಗ ಮನ್ನಾರ್ ದ್ವೀಪದಿಂದ ಜನರು, ದನ-ಕರುಗಳು ನಡೆದುಕೊಂಡೇ ಲಂಕೆಗೆ ಹೋಗುತ್ತಾರೆ. ಮೊದಲು ಈ ಸೇತುವೆಯ ಮೂಲಕವೇ ಜನರು ಅಲ್ಲಿಗೆ ಹೋಗಿ ಬರುತ್ತಿದ್ದರು. ಆದರೆ ಸಮುದ್ರದ ಅಲೆಗಳ ಹೊಡೆತಕ್ಕೆ ಆ ಸೇತುವೆ ಒಡೆದು ಹೋಗಿ, ಕ್ರಿ.ಶ. ೧೪೮೦ರ ಹೊತ್ತಿಗೆ ಈ ಓಡಾಟ ನಿಂತುಹೋಗಿತ್ತು. ಈ ಸೇತುವೆಯ ಎರಡೂ ಬದಿಗಳಲ್ಲಿ ಸಮುದ್ರದ ನೀರು ಕಡಿಮೆ; ಇವುಗಳ ನಡುವೆ ಮರಳು ಹಾಗೂ ಪರ್ವತಗಳಿವೆ. ಇದರಿಂದ ಸಣ್ಣ ದೋಣಿಗಳು ಮಾತ್ರ ಅಲ್ಲಿ ಹೋಗಬಲ್ಲವು; ಹಡಗುಗಳು ಅದರ ಮೂಲಕ ಚಲಿಸವು. ಶ್ರೀಮಾತೆ ಇದನ್ನೆಲ್ಲ ನೋಡಿ, ಕೇಳಿ ''ನೋಡಿದೆಯಾ ಮಗೂ, ಯಾವುದೋ ಯುಗದ ಚಿಹ್ನೆ ಈಗಲೂ ಉಳಿದಿದೆ!' ಎಂದರು.

ನಾವು ಸ್ಟೀಮರ್ ಮೂಲಕ ರಾಮೇಶ್ವರಕ್ಕೆ ಬಂದ ಪ್ರದೇಶಕ್ಕೆ ಪಾಂಬನ್ ಅಥವಾ ಪವನ ಬಂದರು ಎನ್ನುತ್ತಾರೆ. ಈ ಬಂದರಿನಿಂದ ಅನೇಕ ಸ್ಟೀಮರ್‌ಗಳು ಕೊಲೊಂಬೋ, ಮದ್ರಾಸ್, ತೂತುಕುಡಿ (Tuticorin) ಮೊದಲಾದ ಸ್ಥಳಗಳಿಗೆ ಹೋಗಿ ಬರುತ್ತವೆ. ಈ ಬಂದರಿನ ಖಾರಿ ಪ್ರದೇಶದಲ್ಲಿ ಸಾಹೇಬರುಗಳ (ವಿದೇಶೀಯರ) ಮೂರು-ನಾಲ್ಕು ಬಂಗಲೆ, ಕೆಲವು ಗೋಡೌನ್ ಹಾಗೂ ಒಂದು ಧರ್ಮಶಾಲೆ ಇವೆ. ನಾವು ಈ ಬಂದರಿನ ಮೂಲಕ ಮತ್ತೆ ರೈಲುಗಾಡಿಯಲ್ಲಿ ರಾಮೇಶ್ವರ ಸ್ಟೇಶನ್ನಿಗೆ ರಾತ್ರಿ ಸುಮಾರು ಹನ್ನೊಂದು ಗಂಟೆಯ ಹೊತ್ತಿಗೆ ತಲುಪಿದೆವು. ಪಂಡಾ ಗಂಗಾರಾಮ ಪೀತಾಂಬರನು ನಡೆಸುವ ಒಂದು ಎರಡಂತಸ್ತಿನ ಮನೆಯಲ್ಲಿ ಉಳಿದುಕೊಂಡೆವು. ಸ್ಟೀಮರ್‌ನಿಂದ ಇಳಿದು ರಾಮೇಶ್ವರ ದ್ವೀಪಕ್ಕೆ ಹೋಗುವ ರೈಲುಗಾಡಿಯನ್ನೇರುವಾಗ ಶ್ರೀಮಾತೆಯವರನ್ನು ಆಧರಿಸಿ ಹಿಡಿದುಕೊಂಡು ಹೋಗಬೇಕಾಯಿತು. ಆ ಕಾರಣದಿಂದ ಒಂದು ಚೀಲವನ್ನು ಕಳೆದುಕೊಳ್ಳಬೇಕಾಯಿತು ಕೂಡ.

ರಾಮೇಶ್ವರ ದೇವಾಲಯದ ನಾಲ್ಕೂ ಭಾಗಗಳಲ್ಲಿನ ಐವತ್ತು-ಅರುವತ್ತು ಕೋಣೆಗಳಲ್ಲಿ ಬ್ರಾಹ್ಮಣರು ಅಥವಾ ಪಂಡಾಗಳು ವಾಸಮಾಡುತ್ತಾರೆ. ಇತರ ಜಾತಿಯ ಜನರೂ ಅಲ್ಲಿ ವಾಸವಾಗಿದ್ದಾರೆ. ಅಲ್ಲಿ ಎಲ್ಲ ಸಂಪ್ರದಾಯದ ಸಾಧುಗಳ ಮಠಗಳಿವೆ. ಈ ಪ್ರದೇಶ ಒಂದು ಸಣ್ಣ ಪಟ್ಟಣದಂತಿದೆ. ಅಂಗಡಿಗಳಲ್ಲಿ ಎಲ್ಲ ಸಾಮಗ್ರಿಗಳೂ ದೊರೆಯುತ್ತವೆ. ಅನೇಕ ಧರ್ಮಶಾಲೆಗಳು, ಯಾತ್ರಿಕರು ತಂಗಲು ಪಂಡಾಗಳು ನಿರ್ಮಿಸಿದ ವಸತಿಮನೆಗಳು ಇಲ್ಲಿವೆ. ಈ ಪಂಡಾಗಳಿಗೆ ಆರ್ಯಾವರ್ತ(ಉತ್ತರ ಭಾರತದ) ವಾಸಿಗಳ ಭಾಷೆ ತಿಳಿಯದ ಕಾರಣ, ಎಲ್ಲರ ಕೆಲಸ ಸುಲಭವಾಗುವಂತೆ ಒಬ್ಬರು-ಇಬ್ಬರು ಆರ್ಯಾವರ್ತವಾಸಿಗಳಾದ ಹಣ ಸಂಗ್ರಹಕಾರರು ಇಲ್ಲಿದ್ದಾರೆ. ರಾಮೇಶ್ವರದಲ್ಲಿ ಎಲ್ಲ ಕಡೆ ಬಾವಿಯ ನೀರನ್ನೇ ಉಪಯೋಗಿಸುತ್ತಾರೆ. ಈ ನೀರು ಸಿಹಿಯಾಗಿದೆ; ನೀರಿಗೆ ಕೊರತೆಯೂ ಇಲ್ಲ. ಈ ದ್ವೀಪದಲ್ಲೆಲ್ಲ ಮರಳು ತುಂಬಿದೆ, ಎಲ್ಲೆಡೆ ಅಕೇಶೀಯಾ ಮರ ಕಾಣಿಸುತ್ತದೆ. ಯಾವುದೇ ಕೃಷಿ ಇಲ್ಲಿಲ್ಲ. ಈ ದ್ವೀಪದ ಬಹುಪಾಲು ಜನರು ದಾನವನ್ನು ಆಶ್ರಯಿಸಿಯೇ ಜೀವನ ಸಾಗಿಸುತ್ತಾರೆ. ಈ ದ್ವೀಪವು ಮದುರೈ ಜಿಲ್ಲೆಗೆ ಸೇರಿದೆ. ರಾಮನಾಡಿನ ರಾಜ ಉಳಿದೆಲ್ಲ ಜಮೀನ್ದಾರರ ನಡುವೆ ಪ್ರಮುಖನಾಗಿದ್ದಾನೆ.

ರಾಮೇಶ್ವರವು ಪ್ರಕಟವಾದ ವಿಷಯವಾಗಿ ಪುರಾಣದಲ್ಲಿ ಹೇಳಿದೆ: ಶ್ರೀರಾಮಚಂದ್ರನು ವಾನರ ಸೈನ್ಯದೊಂದಿಗೆ ಲಂಕೆಗೆ ಹೋಗಲು ಸೇತುಬಂಧನ ಕಾರ್ಯವನ್ನು ಮಾಡುವಾಗ ಬಾಯಾರಿಕೆಯಾಗಿ, ಕುಡಿಯುವ ನೀರನ್ನು ತರಲು ಆದೇಶ ಮಾಡಿದ. ನೀರನ್ನು ತಂದಾಗ ಅವನಿಗೆ ನೆನಪಾಯಿತು, ಇನ್ನೂ ತಾನು ಶಿವಪೂಜೆ ಮಾಡಿಲ್ಲವೆಂದು. ಹೇಗೆತಾನೇ ನೀರು ಕುಡಿಯಲಿ? ಹೀಗಾಗಿ ನೀರು ಕುಡಿಯದೆ ಅವನು ಮಣ್ಣಿನ ಶಿವಲಿಂಗವನ್ನು ನಿರ್ಮಿಸಿ, ಅದನ್ನು ಯಥಾವಿಧಿ ಪೂಜೆ ಮಾಡಿ ಪ್ರಾರ್ಥಿಸಿದ: ''ಹೇ ಶಂಭೋ! ಈ ಸಮುದ್ರದ ನೀರು ಅಗಾಧ. ರಾಕ್ಷಸಾಧಿಪತಿಯಾದ ರಾವಣ ಕೂಡ ಅತ್ಯಂತ ಬಲಶಾಲಿ. ಯುದ್ಧದಲ್ಲಿ ನನಗೆ ಒಂದೇ ಒಂದು ಸಹಾಯವಾಗಿ ಲಭಿಸಿರುವ ಈ ವಾನರ ಕುಲದವರೆಲ್ಲ ಚಪಲರು. ಹೀಗಾಗಿ, ಹೇ ಪ್ರಭೋ! ಈ ವಿಚಾರವಾಗಿ ನೀನು ನನಗೆ ನೆರವಾಗಬೇಕು. ರಾವಣನು ನಿನ್ನ ಭಕ್ತನಾದ್ದರಿಂದ ಮಾನವರಿಗೆ ಅವನು ಯಾವಾಗಲೂ ಅಜೇಯನಾಗಿದ್ದಾನೆ — ಆದರೂ ಶಿವನೆ, ನೀನು ಸರ್ವದಾ ಧರ್ಮದ ಪಕ್ಷಪಾತಿಯಾಗಿರುವವನು; ನನ್ನ ಪ್ರಾರ್ಥನೆಯನ್ನು ಈಡೇರಿಸು.'' ಶ್ರೀರಾಮನ ಈ ಸ್ತುತಿಯಿಂದ ಭಗವಾನ್ ಶಂಕರನು ತನ್ನ ಜ್ಯೋತಿರ್ಮಯವಾದ ರೂಪವನ್ನು ಧರಿಸಿ, ಪಾರ್ವತಿ ಹಾಗೂ ತನ್ನ ಗಣಗಳಿಂದ ಕೂಡಿ ಅವನ ಮುಂದೆ ಪ್ರತ್ಯಕ್ಷನಾದ. ಹೀಗೆ ಶ್ರೀರಾಮನು ಶಿವನ ದರ್ಶನ ಮಾಡಿ, ಮತ್ತೆ ವಿವಿಧ ಉಪಚಾರಗಳಿಂದ ಪೂಜೆ ಹಾಗೂ ಸ್ತವಗಳನ್ನು ಪಠಿಸಿ, ತನ್ನ ವಿಜಯಕ್ಕಾಗಿ ಪ್ರಾರ್ಥಿಸಿಕೊಂಡ. ಆಗ ಮಹಾದೇವ ಹೇಳಿದ, ''ನಿನಗೆ ಜಯವಾಗಲಿ!'' ಆಗ ಶ್ರೀರಾಮ ಮತ್ತೆ ಪ್ರಾರ್ಥಿಸಿದ, ''ಹೇ ದೇವ! ನೀನು ನಿನ್ನ ದಾಸನಾದ ನನ್ನ ಮೇಲೆ ಅಹೇತುಕವಾದ ಕೃಪೆಯನ್ನು ದಾನ ಮಾಡಿದ್ದರೆ, ಲೋಕಹಿತಕ್ಕಾಗಿಯೂ, ಜಗತ್ತನ್ನು ಪವಿತ್ರಗೊಳಿಸುವುದಕ್ಕಾಗಿಯೂ ದಯವಿಟ್ಟು ಈ ಸ್ಥಳದಲ್ಲಿಯೇ ಚಿರಕಾಲ ನೆಲೆಸ

ಬೇಕು.'' ಮಹಾದೇವನು ಭಕ್ತನ ಪ್ರಾರ್ಥನೆಯನ್ನು ಮನ್ನಿಸಿ ''ತಥಾಸ್ತು'' ಎಂದು ಹೇಳಿ, ಅಲ್ಲೇ ಲಿಂಗರೂಪಿಯಾದನು. ಅವನು ಭೂಮಂಡಲದಲ್ಲೆಲ್ಲ 'ರಾಮೇಶ್ವರ' ಎಂಬ ಹೆಸರಿನಿಂದ ಪ್ರಸಿದ್ಧನಾಗಿ ಈ ಸಮುದ್ರತೀರದಲ್ಲಿ ನೆಲೆಸಿರುತ್ತಾನೆ.

ರಾಮೇಶ್ವರನು ಪ್ರಕಟಗೊಂಡ ವಿಷಯವಾಗಿ ಪುರಾಣದಲ್ಲಿ ಮೇಲೆ ಹೇಳಿದಂತೆ ವರ್ಣನೆಯಿದ್ದರೂ, ಇನ್ನೂ ಎರಡು ಸುಂದರ ವಾದ ದಂತಕಥೆಗಳು ಪ್ರಚಲಿತವಾಗಿವೆ: ೧)ಜನರ ನಡುವೆ ಪ್ರಚಲಿತ ವಾಗಿರುವುದು. ೨) ಮಂದಿರದ ಒಂದು ಕೋಣೆಯಲ್ಲಿ ರಾಮ ನಾಡಿನ ರಾಜನು ರಚಿಸಿದ ಮೂರ್ತಿಯನ್ನು ಕುರಿತಾದುದು.

ಲಂಕೆಯಿಂದ ಬಿಡುಗಡೆ ಹೊಂದಿದ ಸೀತಾದೇವಿಯು ಶ್ರೀರಾಮನಿಂದ ವಿಶಾಲ ಸಮುದ್ರದ ಮೇಲೆ ರಚಿತವಾದ 'ಸೇತು ಬಂಧ' ಸೇತುವೆಯನ್ನು ನೋಡಿ ಆಶ್ಚರ್ಯಚಕಿತಳಾದಳು. ವಿಸ್ಮಯ, ಆನಂದಗಳಿಂದ ಕೂಡಿದ ಆಕೆ ತನ್ನ ಪತಿದೇವನ ಕೀರ್ತಿ ಚಿರಕಾಲವೂ ಅಕ್ಷಯವಾಗಿ ಉಳಿಯುವ ಬಯಕೆಯಿಂದ ಈ ಪ್ರದೇಶದಲ್ಲಿ ಶಿವನ ಮೂರ್ತಿಯನ್ನು ಪ್ರತಿಷ್ಠೆ ಮಾಡಲು ಯತ್ನಿಸಿ ದಳು. ಹೀಗಾಗಿ ಪ್ರತಿಷ್ಠಾಪನೆ ಮಾಡಲು ಉಪಯುಕ್ತರಾದ ಶಿವ ಲಿಂಗವನ್ನು ತರಲು ಹನುಮಂತನು ಪ್ರೇರಿತನಾದನು. ಸೀತೆಯ ಆದೇಶದಂತೆ, ಆ ಲಿಂಗವನ್ನು ಪಡೆಯಲು ಹನುಮಾನ್ ಭಾರ ತದ ನಾನಾ ಸ್ಥಳಗಳನ್ನೆಲ್ಲ ಸುತ್ತಾಡಿ, ಕೊನೆಗೆ ಕೇದಾರನಾಥ, ಗೋಕರ್ಣ ಹಾಗೂ ಇನ್ನಿತರ ಕೆಲವು ಲಿಂಗಗಳನ್ನು ಅಲ್ಲಿಗೆ ತಂದು ಸೀತೆಗೆ ನೀಡಿದ. ಆ ಲಿಂಗಗಳ ನಡುವೆ ಕಾಶಿಯ ವಿಶ್ವನಾಥ ಲಿಂಗ ವಿಲ್ಲದ್ದನ್ನು ಸೀತಾದೇವಿ ನೋಡಿದಳು. ಅದನ್ನು ತರಲು ಆಕೆ ಮತ್ತೆ ಹನುಮಂತನಿಗೆ ಆಜ್ಞಾಪಿಸಿದಳು. ಹನುಮಂತನು ಬರುವಾಗ ತಡವಾದ್ದರಿಂದ, ಅವನಿಗೆ ಆ ಕಾರ್ಯ ಅಸಾಧ್ಯವೆಂದು ತಿಳಿದ ಸೀತಾದೇವಿ, ತಾನೇ ಖಿಚಡಿ ಹಾಗೂ ಅನ್ನಪಿಂಡವನ್ನು ಆ ಜಾಗ ದಲ್ಲಿ ಚೆಲ್ಲಿದಳು. ಅದು ಕ್ರಮೇಣ ಗಟ್ಟಿಯಾಗಿ ಕಲ್ಲಿನಂತೆ ಕಠಿಣ ವಾದ, ಹಾಗೂ ಲಿಂಗದ ಆಕಾರವನ್ನು ತಳೆಯಿತು. ಆಗ ಆಕೆ ಅದನ್ನು 'ರಾಮೇಶ್ವರ'ವೆಂದು ಕರೆದಳು. ಹೀಗೆ ರಾಮೇಶ್ವರದ ಸ್ಥಾಪನೆಯಾಯಿತು. ಅನಂತರ ಹನುಮಂತನು ಕಾಶಿಯಿಂದ ವಿಶ್ವೇಶ್ವರನನ್ನು ತಂದ; ರಾಮೇಶ್ವರನನ್ನು ಕಂಡು ಅಪಮಾನ, ಕ್ರೋಧಗಳಿಂದ ತನ್ನ ಬಾಲದಿಂದ ಆ ಲಿಂಗವನ್ನು ಕಿತ್ತು ಎಸೆಯಲು ಯತ್ನಿಸಿದ. ಆದರೆ ಜಾನಕಿಯು ಸ್ಥಾಪಿಸಿದ ಶಿವಲಿಂಗವನ್ನು ಕಿತ್ತೆಸೆ ಯುವುದಿರಲಿ, ಹನುಮಂತನ ಬಲಪ್ರಯೋಗದಿಂದಾಗಿ ಅವನ ಬಾಲವೇ ಕಿತ್ತು ಬಂತು. ಅವನು ಈ ಸ್ಥಳದಿಂದ ಒಂದು ಮೈಲಿ ದೂರವಿರುವ 'ರಾಮಝುರ್ಕಾ' ಎಂಬ ಪ್ರದೇಶಕ್ಕೆ ಹೋಗಿ ಬಿದ್ದ. ಶ್ರೀರಾಮನು ಇದನ್ನು ಕಂಡು, ತನ್ನ ಭಕ್ತ ಹನುಮಂತನ ಬಳಿಗೆ ಹೋಗಿ ಅವನನ್ನು ಸಮಾಧಾನಪಡಿಸಿದ. ಅವನು ತಂದ ಲಿಂಗ ಗಳನ್ನು ವಿಶ್ವನಾಥ ಹಾಗೂ ಗೋಕರ್ಣವೇ ಮೊದಲಾದ ಪ್ರದೇಶ ಗಳಲ್ಲಿ ಪ್ರತಿಷ್ಠಾಪಿಸಿದ.



**ಇನ್ನೊಂದು ಕಥೆ:** ಲಂಕೆಯಿಂದ ಜಾನಕಿಯನ್ನು ಬಿಡುಗಡೆ ಮಾಡಿ, ಮರಳಿ ಬರುವಾಗ ಶ್ರೀರಾಮಚಂದ್ರನು ಈ ಸ್ಥಳಕ್ಕೆ ಬಂದ. ಅಲ್ಲಿ ಶಿವಪೂಜೆ ಮಾಡುವ ಇಚ್ಛೆಯಿಂದ ಹನುಮಂತನಿಗೆ ಕಾಶಿಯಿಂದ ಒಂದು ಶಿವಲಿಂಗವನ್ನು ತರುವಂತೆ ಆದೇಶ ನೀಡಿದ. ಆದೇಶ ಪಡೆದ ಕೂಡಲೇ ವಾಯುಪುತ್ರನಾದ ಹನುಮಂತನು ವಾಯುವೇಗದಿಂದ ಹೋಗಿ, ಕಾಶಿಯಲ್ಲಿ ಬಂದಿಳಿದ. ದಾರಿ ಯಲ್ಲಿ ಹಲವಾರು ಶಿವಲಿಂಗಗಳು ಬಿದ್ದಿರುವುದನ್ನು ಕಂಡು, ತನ್ನ ಸ್ವಭಾವಕ್ಕೆ ಅನುಗುಣವಾಗಿ 'ಶಿವ ಓಡಿ ಹೋದನು' ಎಂದು ಭಾವಿ ಸಿದ. ಒಂದಕ್ಕೆ ಬದಲಾಗಿ ಎರಡು ಲಿಂಗಗಳನ್ನು ತನ್ನೆರಡು ಭುಜ ಗಳಲ್ಲಿ ಹೊತ್ತುಕೊಂಡ. ಶಿವನನ್ನು ಆನಂದಪಡಿಸುವುದಕ್ಕಾಗಿ ತನ್ನ ಬಾಲಕ್ಕೆ ಒಂದು ಗಂಟೆಯನ್ನು ಕಟ್ಟಲು ಯತ್ನಿಸಿದ. ಗಂಟೆಯ ಧ್ವನಿಯಿಂದ ತನಗೆ ಶಿವನ್ನು ಕೊಂಡೊಯ್ಯುವುದು ಸುಲಭವೆಂದು ಅವನು ಭಾವಿಸಿದ. ಆದರೆ ಗಂಟೆ ಕಟ್ಟುತ್ತಿರುವಾಗ ಒಬ್ಬ ಶಿವ ಪಲಾಯನ ಮಾಡಿಬಿಟ್ಟ, ಆ ಲಿಂಗ ಬಿದ್ದುಹೋಯಿತು. ಉಳಿ ದಿರುವ ಶಿವಲಿಂಗದೊಂದಿಗೆ ಹನುಮಂತ ಮರಳಿದ. ಅವನು ಬರುವುದು ತಡವಾದ್ದರಿಂದ ಶ್ರೀರಾಮಚಂದ್ರ ಸಮುದ್ರತೀರ ದಲ್ಲಿದ್ದ ಮರಳಿನಿಂದ ಶಿವಲಿಂಗವನ್ನು ನಿರ್ಮಿಸಿ ಸ್ಥಾಪನೆ ಮಾಡಿದ್ದ. ಅವನು ಆ ಲಿಂಗದ ಪೂಜೆ ಮಾಡಲು ಹೊರಟದ್ದನ್ನು ನೋಡಿದ ಹನುಮಂತ, ಮುಖಬಾಡಿಸಿ ನಿಂತುಕೊಂಡ. ಅವನ ಮನಸ್ಸನ್ನರಿತು, ಭಕ್ತರ ಮಾನ ಕಾಪಾಡುವುದಕ್ಕಾಗಿ ಅವನು ತಂದ ಶಿವಲಿಂಗವನ್ನು ಮೊದಲೇ ಪ್ರತಿಷ್ಠೆ ಮಾಡಿ, ಪೂಜೆ ಮಾಡಿದ ಬಳಿಕವೇ ತಾನು ನಿರ್ಮಿಸಿದ ಶಿವಲಿಂಗವನ್ನು ಪ್ರತಿಷ್ಠೆ ಮಾಡಿದ. ಆದ್ದರಿಂದ ಈ ನಿಯಮದ ಪ್ರಕಾರ ಮೊದಲಿನಿಂದ ಇಲ್ಲಿ ಹನುಮಾನ್ ತಂದ ವಿಶ್ವನಾಥನ ಪೂಜೆಯಾದ ಬಳಿಕ ಶ್ರೀರಾಮನು ಸ್ಥಾಪಿಸಿದ ರಾಮೇಶ್ವರನ ಪೂಜೆ, ನೈವೇದ್ಯಗಳು ನಡೆಯುತ್ತಿದ್ದಿರಬೇಕು. *(ಮುಂದುವರಿಯುವುದು)*